# ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

'MUNJAVU' Kannada Weekly, KOPPA-CHM. ಫೋನ್ : 114

8ನೇ ವರ್ಷ 26ನೇ ಸಂಚಿಕೆ ಕೊಪ್ಪ 11-2-1990 ಭಾನುವಾರ ಬೆಲೆ 60 ಪೈಸೆ


## ಹಿರಿಯ ವಕೀಲ ರಾಮರಾವ್ ಇನ್ನಿಲ್ಲ

ನ.ರಾ. ಪುರ : ಇಲ್ಲಿನ ಹಿರಿಯ ವಕೀಲರಲ್ಲೊಬ್ಬರಾದ ಎಚ್. ಎಸ್. ರಾಮರಾವ್ ಫೆ. 8ರ ರಾತ್ರಿ 10-45ರ ಹೊತ್ತಿಗೆ ತೀವ್ರ ಹೃದಯಾಘಾತದಿಂದ ನಿಧನರಾದರು.

ಅಂದು ಕೋರ್ಟಿಗೆ ಹೋಗಿ ಬಂದು, ರಾತ್ರಿಯವರೆಗೂ ಮಾಮೂಲಿನಂತೆ ಚಟುವಟಿಕೆಯಾಗಿದ್ದವರು ರಾತ್ರಿ ಇದ್ದಕ್ಕಿದ್ದಂತೆ ತೀವ್ರ ಸುಸ್ತು ಎಂದಾಗ ಕೂಡಲೇ ಡಾಕ್ಟರನ್ನು ಕರೆ ತಂದು ಚಿಕಿತ್ಸೆ ಮಾಡಿದರೂ ಅದಾಗಲೇ ತೀವ್ರ ಹೃದಯಾಘಾತ ಅನುಭವಿಸಿದ್ದ, ರಾಮರಾವ್ ಅವರು ಡಾಕ್ಟರಿಗೂ ಇತರರಿಗೂ 'ಗುಡ್ ಬೈ' ಹೇಳುತ್ತಲೇ ಚಿರನಿದ್ರೆಗೆ ಪ್ರವೇಶಿಸಿದರು.

ಅವರ ಗೌರವಾರ್ಥ ಫೆ. 9ರಂದು ಪೇಟೆಯಲ್ಲಿ ಹಲವಾರು ವಹಿವಾಟುಗಳು ಮುಚ್ಚಿದ್ದವು. ಸಾವಿರಾರು ಜನ ಮೃತರ ಅಂತಿಮ ದರ್ಶನ ಪಡೆದರು. ಲಾಯರ್‌ಗಳು ಮತ್ತು ಕೋರ್ಟ್ ಸಿಬ್ಬಂದಿ ಸಂತಾಪ ಸೂಚಕ ಸಭೆ ನಡೆಸಿದರು. ಕಲಾಪಗಳು ನಡೆಯಲಿಲ್ಲ

# ಶೃಂಗೇರಿ ಕಾಲೇಜಿನ ಬೆಳ್ಳಿ ಹಬ್ಬ

**ಶೃಂಗೇರಿ : 1964ರ ಡಿಸೆಂಬರ್ 31ರಂದು ಶಂಕು ಸ್ಥಾಪನೆಗೊಂಡು 27.6.65ರಂದು ಅಧಿಕೃತವಾಗಿ ಆರಂಭವಾದ ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜು ತನ್ನ ಬೆಳ್ಳಿ ಹಬ್ಬವನ್ನು ಇದೇ ತಿಂಗಳ 16ರಿಂದ 18ರವರೆಗೆ ಆಚರಿಸಲಿದೆ.**

ಫೆ. 16ರ ಸಂಜೆ 6 ಗಂಟೆಗೆ ಹರಿಹರಪುರ ಮಠಾಧೀಶರ ಅಧ್ಯಕ್ಷತೆಯಲ್ಲಿ ನಡೆಯುವ ರಜತೋತ್ಸವ ಸಮಾರಂಭ ಮತ್ತು ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಯು.ಕೆ. ಶಾಮಣ್ಣ ಮತ್ತು ಮಣಿಪಾಲ್ ಅಕಾಡೆಮಿ ಆಫ್ ಎಜುಕೇಶನ್‌ನ ರಿಜಿಸ್ಟ್ರಾರ್ ರಮೇಶ್ ಯು. ಪೈ ಮುಖ್ಯ ಅತಿಥಿಗಳಾಗಿರುವರು.

ಕಾಲೇಜು ದಿನಾಚರಣೆ ಫೆ. 17ರ ಸಂಜೆ 6ಕ್ಕೆ ಕುವೆಂಪು ವಿ. ವಿ. ಕುಲಪತಿ ಡಾ|| ಶಾಂತಿನಾಥ ದೇಸಾಯಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು. ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ ಪ್ರೊ|| ಡಿ. ಈಶ್ವರಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಫೆ. 18ರ ಭಾನುವಾರ ಬೆಳಗ್ಗೆ 10 ಗಂಟೆಗೆ ಪ್ರಾಧ್ಯಾಪಕ ಡಾ|| ಸಿ. ಪಿ. ಕೃಷ್ಣಕುಮಾರ್ ಅಧ್ಯಕ್ಷತೆಯಲ್ಲಿ "ಜ್ಞಾನ ಪೀಠ ಪ್ರಶಸ್ತಿ ವಿಜೇತ ಕುವೆಂಪು ಸಾಹಿತ್ಯ ಗೋಷ್ಠಿ" ನಡೆಯಲಿದ್ದು, ಡಾ|| ಪ್ರಧಾನ ಗುರುದತ್ತ ಮತ್ತು ಡಾ|| ಶ್ರೀಕಂಠ ಕೂಡಿಗೆ ವಿಷಯ ಮಂಡಿಸುವರು.

ಅಂದು ಸಂಜೆ 6 ಗಂಟೆಗೆ ಹಳೇ ವಿದ್ಯಾರ್ಥಿ ದಿನಾಚರಣೆ. ಮುಖ್ಯ ಅತಿಥಿಗಳು ಇದೇ ಕಾಲೇಜಿನ ಚೊಚ್ಚಲ ತಂಡದ ಇಬ್ಬರು ಹಳೇ ವಿದ್ಯಾರ್ಥಿ 'ಹುಲಿ'ಗಳು, ಇದೇ ಊರಿನವರು. ಒಬ್ಬರು–ಬೆಂಗಳೂರಿನಲ್ಲಿ ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್ ಆಗಿರುವ ಐ. ಪಿ. ಎಸ್. ಅಧಿಕಾರಿ ಕೆ. ವಿ. ರವೀಂದ್ರನಾಥ ಠಾಗೋರ್. ಇನ್ನೊಬ್ಬ ಮುಖ್ಯ ಅತಿಥಿ— ಹಾಸನದಲ್ಲಿ ಸಿವಿಲ್ ನ್ಯಾಯಾಧೀಶರಾಗಿರುವ ಎಂ. ಜಿ. ಸುಧೀಂದ್ರ ಅವರು.

ಮೂರು ದಿನಗಳೂ ರಾತ್ರಿ 8.30ರಿಂದ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಪ್ರದೇಶದ ಜನತೆಗೆ ಮನರಂಜನೆಯ ರಸದೌತಣ ನೀಡಿಯಾವೆಂದು ನಿರೀಕ್ಷಿಸಬಹುದು.

### ಕೊಪ್ಪದಲ್ಲಿ ಸಾರ್ವಜನಿಕರಿಗೆ ಶಾಸಕ ಶಾಮಣ್ಣನವರ ಭೇಟಿ ವ್ಯವಸ್ಥೆ

ಕೊಪ್ಪ : ಶಾಸಕ ಯು.ಕೆ. ಶಾಮಣ್ಣ ಅವರನ್ನು ಪ್ರತಿ ಭಾನುವಾರ ಬೆಳಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಕೊಪ್ಪದ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಸಾರ್ವಜನಿಕರು ಭೇಟಿ ಮಾಡಬಹುದೆಂದು ತಾ|| ಯುವ ಕಾಂಗ್ರೆಸ್ ಅಧ್ಯಕ್ಷ ಜಿ. ಎಸ್. ನಾಗೇಶ್ ತಿಳಿಸಿದ್ದಾರೆ.

ಶಾಸಕರಿಗೆ ಅರ್ಜಿ, ದೂರು ವಗೈರೆ ತಲ್ಪಿಸಬಯಸುವವರು ವಾರದ ಇತರ ದಿನಗಳಲ್ಲೂ ಸಹ ಕಛೇರಿ ಸಹಾಯಕರ ಹತ್ತಿರ ಸಲ್ಲಿಸಬಹುದು. ಕಛೇರಿ ಇರುವುದು ಮಧ್ಯ ಪೇಟೆಯ ರಾಘವೇಂದ್ರ ಸ್ಟೋರ್ಸ್ ಮಹಡಿಯ ಮೇಲೆ (ಭಾರತ್ ಪ್ರಾವಿಜನ್ ಸ್ಟೋರ್ಸ್ ಪಕ್ಕ).

### ನ.ರಾ. ಪುರದಲ್ಲಿ ಕಾಲೇಜು ಮಟ್ಟದ ಪ್ರಬಂಧ ಸ್ಪರ್ಧೆ ವಿಜೇತರು

ನರಸಿಂಹರಾಜಪುರ : ಇಲ್ಲಿನ ತಾ|| ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾಲೇಜು ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿ ಡಿ. ದಯಾನಂದ ಮೊದಲ ಸ್ಥಾನವನ್ನೂ, ಎಂ. ಎ. ಎಲ್ದೋ ಎರಡನೇ ಸ್ಥಾನವನ್ನೂ ಪಡೆದರು. ಪ್ರೌಢ ಶಾಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಯಾರೂ ಭಾಗವಹಿಸಿರಲಿಲ್ಲ.

### ನವೋದಯ ಶಾಲೆ ಪ್ರವೇಶ ಪರೀಕ್ಷೆ ಮುಂದಕ್ಕೆ

ಬಾಳೆಹೊನ್ನೂರು : ಇಲ್ಲಿಗೆ ಸಮೀಪದ ಜವಾಹರ್ ನವೋದಯ ವಿದ್ಯಾಲಯದ ಆರನೇ ತರಗತಿಯ ಪ್ರವೇಶ ಪರೀಕ್ಷೆಯನ್ನು ತಾ : 24-2-90 ಕ್ಕೆ ಬದಲಾಗಿ ತಾ : 18-3-90ನೇ ಭಾನುವಾರಕ್ಕೆ ಮುಂದೂಡಲಾಗಿದೆ ಎಂದು ಪ್ರಿನ್ಸಿಪಾಲ್ ತಿಳಿಸಿದ್ದಾರೆ.

### ಕೋತಿ ಕಾಟ

ಕೊಪ್ಪ : ಇಲ್ಲಿನ ಸರ್ಕಾರಿ ಆಸ್ಪತ್ರೆ ಆವರಣದ ಸುತ್ತಮುತ್ತ ಕೋತಿ ಹಿಂಡಿನ ಹಾವಳಿ ವಿಪರೀತವಾಗಿದೆಯೆಂದು ಸಾರ್ವಜನಿಕರು ದೂರಿದ್ದಾರೆ. ಒಣಗ ಹಾಕಿದ ಬಟ್ಟೆಗಳನ್ನು ಎಗರಿಸಿ ಮರದ ಮೇಲ ಕ್ಕೊಯ್ದು ಇಡುವುದು, ಅಡಿಗೆ ಪದಾರ್ಥಗಳ ಸಹಿತ ಪಾತ್ರೆಗಳನ್ನು ಕದ್ದೊಯ್ಯುವುದು ಮುಂತಾದ ಲೂಟಿಯಲ್ಲದೆ, ಹೊಡೆಯಲು ಹೋದವರನ್ನೇ ಅಟ್ಟಿಸಿಕೊಂಡು ಬರುತ್ತವೆಂಬೂ, ಫೆ. 8 ರಂದು ದೊಡ್ಡ ಮಂಗವೊಂದು ಬಾಲಕಿಯೊಬ್ಬಳಿಗೆ ಪರಚಿ ತೀವ್ರವಾಗಿ ಗಾಯಗೊಳಿಸಿರುವುದಾಗಿಯೂ ತಿಳಿಸಿ, ಪುರಸಭೆಯವರು ಈ ಬಗ್ಗೆ ತುರ್ತು ಗಮನ ನೀಡಬೇಕೆಂದು ಕೋರಿದ್ದಾರೆ.

### ಶೃಂಗೇರಿಯಲ್ಲಿ ಆಹ್ವಾನಿತ ನಿಗದಿ ಓವರ್ ಕ್ರಿಕೆಟ್

ಶೃಂಗೇರಿ : ಇಲ್ಲಿನ ಶಾರದಾ ಕ್ರಿಕೆಟ್ ಅಸೋಸಿಯೇಶನ್ ಫೆ. 17 ರಿಂದ 24ರವರೆಗೆ ಪ್ರತಿ ವರ್ಷದಂತೆ ಆಹ್ವಾನಿತ ನಿಗದಿ ಓವರ್‌ಗಳ ಕ್ರಿಕೆಟ್ ಪಂದ್ಯಾವಳಿ ನಡೆಸಲು ನಿರ್ಧರಿಸಿದೆ. ಈಚೆಗೆ ಆಯ್ಕೆಯಾದ ಸಂಸ್ಥೆಯ ಪದಾಧಿಕಾರಿಗಳು : ಎಸ್. ಆರ್. ಭೂಪತಿ (ಅಧ್ಯಕ್ಷರು), ಎಸ್. ಕೆ. ಉಮೇಶ್ (ಕಾರ್ಯದರ್ಶಿ) ವಿ. ಎಸ್. ಶ್ರೀಧರ್ (ಸಹ ಕಾರ್ಯದರ್ಶಿ), ವಿ. ಎಸ್. ದಿನೇಶ್ (ಖಜಾಂಚಿ), ಹಾಗೂ ಡಿ. ಶ್ರೀಕಾಂತ್ (ವ್ಯವಸ್ಥಾಪಕ) ಕೆ. ಎಸ್. ಶ್ರೀಕಾಂತ್, ನಾಯಕ ಹಾಗೂ ಕೆ. ಮಹೇಶ್, ಉಪನಾಯಕರಾಗಿಯೂ [illegible]

## ಅರಣ್ಯ ಸಿಬ್ಬಂದಿಯಿಂದ ಎಡೆಬಿಡದ ಕಾರ್ಯಾಚರಣೆಯ ನಡುವೆಯೂ
# ಹಿಡಿದಷ್ಟೂ ಮುಗಿಯದ ಗಂಧ ಕಳ್ಳ ಸಾಗಣೆ ಪ್ರಕರಣಗಳು ?

ಕೊಪ್ಪ : ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಮತ್ತು ಚಿಕ್ಕಮಗಳೂರು ಅರಣ್ಯ ವಿಭಾಗಗಳಲ್ಲಿ ಅರಣ್ಯ ಸಿಬ್ಬಂದಿ ಹಗಲಿರುಳೂ ಎಡೆಬಿಡದೆ ಕಾವಲು, ಗಸ್ತು ನಡೆಸುತ್ತಿದ್ದರೂ ಗಂಧದ ಕಳ್ಳ ಸಾಗಣೆ ಪ್ರಕರಣಗಳು ಅವ್ಯಾಹತವಾಗಿ ನಡೆಯುತ್ತಲೇ ಇರುವಂತಿದೆ.

(ಅಥವಾ ಅವ್ಯಾಹತವಾಗಿ ನಡೆಯುತ್ತಿದ್ದ ಈ ಸಮೃದ್ಧ 'ಧಂಧೆ' ಅರಣ್ಯ ಪಡೆಗಳ ಕಾರ್ಯಾಚರಣೆಯಿಂದ ವಿಪುಲವಾಗಿ ಬೆಳಕಿಗೆ ಬರುತ್ತಿದೆ ಎನ್ನಬಹುದೋ?)

ಈ ಮಧ್ಯೆ ಅರಣ್ಯ ಸಿಬ್ಬಂದಿಯ ಮೇಲೆ ಗಂಧ ಕಳ್ಳ ಸಾಗಣೆದಾರರಂದು ಮಾತ್ರವಲ್ಲದೆ, ಜ. 20 ರಂದು ಬೃಹತ್ ಪ್ರಮಾಣದ ಅಕ್ರಮ ಮದ್ಯ ಸಾಗಣೆ ಕೂಡ ಅರಣ್ಯ ಸಿಬ್ಬಂದಿಯಿಂದಲೇ ಪತ್ತೆಯಾದ ಮೇಲೆ (ಅದೂ ಅವರು 25 ಸಾವಿರ ರೂ. ಆಮಿಷಕ್ಕೂ ಬಗ್ಗಲಿಲ್ಲವೆಂದರೆ!) ಇದೀಗ ಮದ್ಯ ವಹಿವಾಟುದಾರರ ಲಾಬಿಯಿಂದ ಕೂಡ ತೀವ್ರ ತರನಾದ ಆಪಾದನೆ ಮತ್ತು ಒತ್ತಡಗಳನ್ನು ಅರಣ್ಯ ಸಿಬ್ಬಂದಿ ಎದುರಿಸುತ್ತಿದ್ದಾರೆನ್ನಲಾಗುತ್ತಿದೆ.

[illegible]

... ಪಾಲ್ ಪ್ರಕರಣ ಇದಕ್ಕೊಂದು ನಿದರ್ಶನವೆನ್ನಿಸುತ್ತದೆ. "ಆದಾಗ್ಯೂ, ನಾವು ನಮ್ಮ ಕೆಲಸ ನಿಲ್ಲಿಸಿಲ್ಲ" ಎಂದು ಕೆಚ್ಚಿನಿಂದ ಹೇಳುವ ಅರಣ್ಯ ಅಧಿಕಾರಿಗಳು ಕಳೆದ ವಾರ ಕೊಪ್ಪ ವಿಭಾಗವೊಂದರಲ್ಲೇ ಗಂಧ ಮತ್ತು ನಾಟ ಕಳ್ಳ ಸಾಗಣೆಯ ನಾಲ್ಕೈದು ಪ್ರಮುಖ ಪ್ರಕರಣಗಳನ್ನು ಪತ್ತೆ ಹಚ್ಚಿ ಮಾಲು ಮತ್ತು ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಇದರಲ್ಲಿ 3 ತಿಂಗಳ ಹಿಂದೆ 'ಅಹಮದ್ ಬಾವಾ ಸಾವಿನ ಪ್ರಕರಣ' ಸೃಷ್ಟಿಸಿ ಭಾರೀ ಗಲಭೆ ಎಬ್ಬಿಸಿದ ಕುಖ್ಯಾತ ಚಕ್ಕಮಕ್ಕಿ ಅಬ್ಬಾಸ್‌ನ ಲಾರಿಯೂ ಸೇರಿದೆ. ಈ ಲಾರಿಯಲ್ಲಿ ಅಕ್ರಮವಾಗಿ ನಾಟಾ ಸಾಗಿಸುತ್ತಿದ್ದುದನ್ನು ತಡೆಯ ಹೋದ ಗಾರ್ಡ್‌ನನ್ನೇ ಅಪಹರಿಸಿಕೊಂಡು ಹೋಗಿ ಕಾಡಿನಲ್ಲಿ ಬಿಟ್ಟು ಪರಾರಿಯಾಗಿದ್ದ ಆರೋಪಿಗಳು ಆನಂತರ ಆ ನಾಟಾವನ್ನು ಸುಟ್ಟು ಹಾಕಿ ತಪ್ಪಿಸಿಕೊಳ್ಳುವಾಗ ಮೂಡಿಗೆರೆ ರೇಂಜರ್ ಲಾರಿಯನ್ನು ವಶಪಡಿಸಿಕೊಂಡರು.

ಫೆ. 9ರ ಬೆಳಗ್ಗೆ ಕಾನಿ – ಗಬ್ಗಲ್ ಮುಖ್ಯ ರಸ್ತೆಯಲ್ಲಿ ಪಿಂಟೊ 970 ಎಂಬ [illegible]

... ಸಾಗಿಸುತ್ತಿದ್ದ ಸುಮಾರು 20 ಸಾವಿರ ರೂ. ಮೌಲ್ಯದ 290 ಕಿಲೊ ಗಂಧವನ್ನು ವಲಯಾರಣ್ಯಾಧಿಕಾರಿ ಭಾಸ್ಕರ್ ನಾಯ್ಕ ಮತ್ತು ಸಿಬ್ಬಂದಿ (ಪೈವರ್ ಹನುಮಂತಪ್ಪ, ಗಾರ್ಡ್‌ಗಳಾದ ಜಾರ್ಜ್ ವಿಕ್ಟರ್ ಲೋಬೊ, ಕೃಷ್ಣ ಮತ್ತು ರಾಮಣ್ಣ) ವಶಪಡಿಸಿಕೊಂಡು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಇವರು ಬೆಂಗಳೂರಿನ ಒಬ್ಬ ಪ್ರಮುಖ ಗಂಧ ಕಳ್ಳಸಾಗಣೆದಾರನೆಂದು ಶಂಕಿಸಲಾಗಿರುವ ವ್ಯಕ್ತಿ ಚಲಿಸುವ ಕಾರಿನಿಂದಲೇ ಎಸ್ಕಾರ್ಟ್ ಆತ ಅಲ್ಲಿಂದ ಧುಮುಕಿ ತಪ್ಪಿಸಿಕೊಂಡಿದ್ದಾನೆ.

ಫೆ. 1ರಂದು ವಲಯ ಅರಣ್ಯಾಧಿಕಾರಿ ಶ್ರೀನಿವಾಸರಾವ್ ಮತ್ತು ಸ್ನೈಪರ್ ಹನುಮಂತಪ್ಪ, ಗಾರ್ಡ್‌ಗಳಾದ ಬಿ. ವಿ. ಲಕ್ಷ್ಮೀನಾರಾಯಣ, ಕೃಷ್ಣ ನಾಯ್ಕ, ಇವರುಗಳ ತಂಡ ಬಾಳೆಹೊನ್ನೂರಿನ ಮಠ [illegible] [illegible]

[illegible]

# ಗ್ರಾಮ ಸಾಮೂಹಿಕ ಭೂಮಿಗಳ ರಕ್ಷಣೆಗೆ ಸಂಘಟಿತ ಯತ್ನಕ್ಕೆ ಕರೆ

ಗ್ರಾಮ ಸಾಮೂಹಿಕ ಭೂಮಿಗಳ ಸಂರಕ್ಷಣೆ ಮತ್ತು ಗ್ರಾಮಗಳ ಸುತ್ತ 'ಹಸಿರು ಪಟ್ಟಿ'ಯ ಅಭಿವೃದ್ಧಿ ರೈತರದೇ ಕರ್ತವ್ಯವಾಗಬೇಕು ಹಾಗೂ ಈ ದಿಸೆಯಲ್ಲಿ ವ್ಯಾಪಕ ಜನ ಜಾಗೃತಿ ಮತ್ತು ಸಂಘಟಿತ ಪ್ರಯತ್ನ ನಡೆಯಬೇಕು ಎಂದು ಶೃಂಗೇರಿ ತಾ॥ ಅತ್ತಿಗದ್ದೆಯ ನಾಗರಿಕ ವಿಚಾರ ವೇದಿಕೆ ಆಶ್ರಯದಲ್ಲಿ ಏರ್ಪಡಿಸಿದ್ದ ವಿಚಾರ ಗೋಷ್ಠಿಯಲ್ಲಿ ಅಭಿಪ್ರಾಯಪಡಲಾಯಿತು.

'ಪಶ್ಚಿಮ ಘಟ್ಟ ಉಳಿಸಿ' ಆಂದೋಲನದ ಮುಖಂಡ ಅನಂತ ಹೆಗಡೆ ಆಶೀಸರ ಮಾತನಾಡಿ, ಸ್ಥಳೀಯ ಜನರನ್ನು ಬಿಟ್ಟು ಅಭಿವೃದ್ಧಿ ಮಾಡುತ್ತೇವೆಂಬ ಯಾವ ಯೋಜನೆಯೂ ಫಲ ನೀಡುವುದಿಲ್ಲ: ಗ್ರಾಮಗಳಲ್ಲಿ ಹಸಿರು ಪಟ್ಟಿ ಉಳಿಸಿ ಬೆಳೆಸಬೇಕಾದ ಹೊಣೆ ಸರ್ಕಾರದ್ದಲ್ಲ, ರೈತರದೇ. ಗ್ರಾಮ ಸಾಮೂಹಿಕ ಭೂಮಿಯ ಉಳಿವಿಗಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಇನ್ನಷ್ಟು ವ್ಯಾಪಕ ಪ್ರಯತ್ನಗಳು ನಡೆಯಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿ.ಪ. ಸದಸ್ಯ ಬಿ ಜಿ. ಚಿದಂಬರ್, ರೈತರಿಗೆ ಅನೇಕ ವಿಷಯಗಳಲ್ಲಿ ಕಾನೂನಿನ ಮತ್ತು ಇತರ ವಿಚಾರಗಳ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ ಸೊಪ್ಪಿನ ಬೆಟ್ಟವೋ, ಸಿ ಅಂಡ್ ಡಿ ಸರ್ವೆಯೋ ಈ ಯಾವ ಬಗ್ಗೆಯೂ ರೈತರಿಗೆ ಏನೂ ತಿಳಿದಿರುವುದಿಲ್ಲ. ಈ ನಿಟ್ಟಿನಲ್ಲಿ ಇಂಥ ವಿಚಾರ ವಿನಿಮಯ ಉಪಯುಕ್ತ ಎಂದು ಶ್ಲಾಘಿಸಿದರು.

ಸಭೆಯಲ್ಲಿ ಹಲವಾರು ಪ್ರತಿನಿಧಿಗಳು ಮಾತನಾಡಿದರು ಈ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳ ನಿರ್ಲಕ್ಷ್ಯ ಮನೋಭಾವ ಟೀಕೆಗೆ ಗುರಿಯಾಯಿತು.

ಸಿ ಮತ್ತು ಡಿ ಭೂಮಿಯ ಮರು ಸರ್ವೆಯಲ್ಲಿ ಈ ಹಿಂದಿನ ತಪ್ಪುಗಳೇ ಪುನರಾವರ್ತಿಸದೆ, ಪ್ರಾಮಾಣಿಕ ಸರ್ವೆ ನಡೆಯಬೇಕು ಹಾಗೂ ಸ್ಥಳೀಯ ಮಂಡಲ ಪಂಚಾಯ್ತಿಯ ಸಹಯೋಗ ಪಡೆದು ಗ್ರಾಮದ ಒಟ್ಟು ಹಿತದೃಷ್ಟಿಯಿಂದ ಯೋಜನೆಯೊಂದನ್ನು ರೂಪಿಸಬೇಕು; ಸರ್ವೆಯಲ್ಲಿ ಬಗರ್ ಹುಕುಂ ಸಾಗುವಳಿ ಸಮೂದಿಸುವಾಗ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡ ನಡೆಯದಂತೆ ಎಚ್ಚರಿಕೆ ಅಗತ್ಯ; ಮರು ಸರ್ವೆ ಬಗೆಗಿನ ತಾ॥ ಮಟ್ಟದ ಸಮಾಲೋಚನಾ ಸಮಿತಿಗಳಲ್ಲಿ ತಾಲ್ಲೂಕಿನ ಶಾಸಕ, ಜಿ. ಪ. ಸದಸ್ಯರು ಮತ್ತು ಆಯಾ ತಾ॥ನಲ್ಲಿ ಶ್ರಮಿಸುತ್ತಿರುವ ಬೆಳೆಗಾರರ ಮತ್ತು ಪರಿಸರಾಸಕ್ತರ ಸಂಘ-ಸಂಸ್ಥೆಗಳ ಇಬ್ಬರು ಪ್ರತಿನಿಧಿಗಳನ್ನೂ ಒಳಗೊಳ್ಳಬೇಕು; ಈ ಸರ್ವೆ ಮುಗಿಯುವವರೆಗೆ, ವಿವಿಧ ಗ್ರಾಮ ಸಾಮೂಹಿಕಭೂಮಿಗಳನ್ನು 'ಮೀಸಲು ಅರಣ್ಯ' ಗಳೆಂದು

(4ನೇ ಪುಟಕ್ಕೆ)

**ಪ್ರತಿಕ್ರಿಯೆ:**

# "ಹಾಲ್ಮುತ್ತೂರಿನ ಹೆಗ್ಗರೆ ತೂಬಿನ ಕೆರೆಯಲ್ಲ"

ಪ್ರಿಯ ಸಂಪಾದಕರೆ,

ನಿಮ್ಮ ಪತ್ರಿಕೆಯ 4-2-90ರ ಸಂಚಿಕೆಯಲ್ಲಿ ಹಾಲ್ಮುತ್ತೂರಿನ ಹೆಗ್ಗರೆಯ ಬಗ್ಗೆ "ತುಂಬಿನಿಂತ ಕೆರೆಗೆ ತೂಬೇ ಇಲ್ಲ!" ಎಂಬ ವರದಿಯಲ್ಲಿನ ಆರೋಪಗಳು ಸತ್ಯಕ್ಕೆ ದೂರವಾದವುಗಳೆಂದು ಸದರಿ ಕೆರೆಯ ಅಚ್ಚುಕಟ್ಟುದಾರರಾದ ನಾವುಗಳು ತಿಳಿಸ ಬಯಸುತ್ತೇವೆ.

ಈ ಕೆರೆಗೆ ಇರುವ ಅಚ್ಚುಕಟ್ಟು ವರದಿಯಲ್ಲಿ ತಿಳಿಸಿರುವಂತೆ 60 ಎಕರೆ ಬಾಗಾಯ್ತು ಭೂಮಿ ಮತ್ತಿತರ ಜಮೀನು ಅಲ್ಲ, 35 ಎಕರೆ ಬಾಗಾಯ್ತು ಮಾತ್ರ. ಇದಕ್ಕೆ ಕೆರೆಯ ಜೌಗು ನೀರು ಸಾಗುವಳಿ ಎಂದು ಸರ್ವೆ ಉತ್ತಾರದಲ್ಲೇ ದಾಖಲೆ ಇದೆ. ಈ ಕೆರೆ ಮತ್ತು ಬಾಗಾಯ್ತು ಹುಟ್ಟಿದಾಗಿನಿಂದಲೂ ಈ ಕೆರೆಯ ನೀರನ್ನು ಬಾಗಾಯ್ತಿಗೆ ಹಾಯಿಸಿಯೇ ಇಲ್ಲ. ಕೆರೆಯ ಮಧ್ಯೆ ಇದ್ದ ತೂಬನ್ನು ಈಗ್ಗೆ 4 ವರ್ಷದ ಹಿಂದೆ ರಿಪೇರಿ ಮಾಡಿದ್ದಾರಾದರೂ ಆ ತೂಬಿನಿಂದ ನೀರು ಹೊರ ಹರಿದರೆ ಅದರಿಂದ ಯಾವ ಬಾಗಾಯ್ತು ಜಮೀನಿಗೂ ನೀರು ಹಾಯಿಸಲು ಸಾಧ್ಯವಿಲ್ಲ. ಏಕೆಂದರೆ ಆ ನೀರು ಹರಿವ ಕಾಲುವೆ ತಗ್ಗಿನಲ್ಲಿದ್ದು, ಎರಡೂ ಕಡೆ ಜಮೀನು ಅದರ ಕಡೆಗೆ ಇಳಿಜಾರಾಗಿವೆ. ಇಂಥ ಕಡೆ ಕೆಳಗಿನಿಂದ ಮೇಲಕ್ಕೆ ನೀರು ಹಾಯಿಸಲು ಆಗುವುದಿಲ್ಲವೆಂಬುದು 'ಕಾಮನ್ ಸೆನ್ಸ್' ತಾನೆ?

ಆದರೂ ಹಟ ಹೊತ್ತು ಆ ತೂಬಿನಲ್ಲಿ ನೀರು ಹರಿಸಿದರೆ ಸುಮ್ಮನೆ ಕೆರೆಯ ನೀರು ಖಾಲಿಯಾಗಿ ಇಡೀ 35 ಎಕರೆ ಬಾಗಾಯ್ತು ಉರಿದು ಹೋಗುತ್ತದೆ. ಅಷ್ಟೇ ಅಲ್ಲ, ಈ ಕೆರೆಯಿಂದ ಕೆಳಭಾಗದಲ್ಲಿ ಸುಮಾರು 30 ಮನೆಗಳಿಗೆ ನೀರೊದಗಿಸುವ ಬಾವಿಗೂ ಹಾಗೂ ಊರಿನ ನಮ್ಮ ಅನೇಕರ ಬಾವಿಗಳಿಗೂ ಈ ಕೆರೆಯ ಜೌಗೇ ಪ್ರಮುಖ ಸೆಲೆ. ಜಾನುವಾರುಗಳಿಗೂ ಈ ಕೆರೆಯ ನೀರು ಬೇಸಿಗೆಯಲ್ಲಿ ಏಕೈಕ ಪ್ರಮುಖ ನೀರಿನ ಆಶ್ರಯ. ತೂಬಿನಲ್ಲಿ ನೀರು ಹರಿಸಿದರೆ, ಕೇವಲ ಕೆರೆ ಬತ್ತಿ ಈ ಎಲ್ಲ ಬಾವಿಗಳಿಗೆ, ಜಾನುವಾರುಗಳಿಗೆ, ಜಮೀನುಗಳಿಗೆ ನೀರಿನ ತಂಪು, ಸೆಲೆ, ಆಶ್ರಯ ಇಲ್ಲವಾಗುತ್ತದೆ.

ಈ ಕಾರಣಕ್ಕಾಗಿಯೇ ಯಾರಾದರೂ ಅಚ್ಚುಕಟ್ಟುದಾರರು ತೂಬಿಗೆ ಬೆಣೆ ಹಾಕಿ, ಅನ್ಯಾಯದ ಆ ತೂಬನ್ನು ಮುಚ್ಚಿರಬಹುದು ಹೊರತು ಅವರು ಕಿಡಿಗೇಡಿಗಳಲ್ಲ. ಇನ್ನು ಮುಂದೆಯೂ ಒಂದು ವೇಳೆ ಯಾವುದೇ ಒತ್ತಡದಿಂದ ಪುನಃ ತೂಬು ಇಡಿಸಿದರೂ ಸಹ ಅದನ್ನು ಯಾರಾದರೂ ಹೀಗೇ ಮುಚ್ಚುವುದಿಲ್ಲವೆಂಬ ಭರವಸೆಯೇನೂ ಇಲ್ಲ.

ಸತ್ಯ ಸಂಗತಿ ಹೀಗಿರುವಾಗ, ಈ ಕೆರೆಯಿಂದ ಒಂದು-ಒಂದೂವರೆ ಕಿ. ಮೀ. ಕೆಳಗೆ ಅರ್ಧ-ಮುಕ್ಕಾಲು ಎಕರೆ ತರಿಯಲ್ಲಿ ತೋಟ ಮಾಡಿಕೊಂಡಿರುವ ಒಬ್ಬಿಬ್ಬರು ಮಾತ್ರ ಹೀಗೆ ತೂಬಿನ ಗುಲ್ಲು ಮಾಡುತ್ತಿದ್ದಾರೆ 'ಬಾಗಾಯ್ತು ಅಚ್ಚುಕಟ್ಟುದಾರರ' ಬಗೆಗಿನ ಇವರ ಕಳಕಳಿಯೂ ಕೇವಲ ಸ್ವಾರ್ಥದ ಮೊಸಳೆ ಕಣ್ಣೀರು ಮಾತ್ರ.

ಈ ಸತ್ಯ ಸಂಗತಿಯನ್ನು ತಿಳಿದೇ ಕಳೆದ ವರ್ಷ ಮಂಡಲ ಪಂಚಾಯ್ತಿಯವರು ಎಲ್ಲಾ ಅಚ್ಚುಕಟ್ಟುದಾರರ ಅಭಿಪ್ರಾಯ ಪಡೆದು ತೂಬು ಮುಚ್ಚಿಸಿ, ಕೆರೆ ಹಿಂದಿನಂತೆಯೇ ನೀರು ತುಂಬಿಕೊಂಡು ಒಸರು ನೀರಿನ ಮೂಲವಾಗಿ ಈ ಜಮೀನು-ಬಾವಿಗಳಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಿದ್ದಾರೆ. ಇದರಲ್ಲಿ ಇಂಜನಿಯರ್‌ಗಳಾಗಲಿ ಮತ್ಯಾರೋ ಆಗಲಿ ಜಿಲ್ಲಾ ಪರಿಷತ್ತಿನ ಹಣ ನುಂಗಿದ್ದಲ್ಲ ಎಂದು ನಾವುಗಳು ಸರ್ಕಾರದ ಮತ್ತು ಸಾರ್ವಜನಿಕರ ಗಮನಕ್ಕೆ ತರಬಯಸುತ್ತೇವೆ.

ಅಚ್ಚುಕಟ್ಟುದಾರರ ಪರವಾಗಿ,
**ಎಚ್. ವೈ. ಸೀತಾರಾಮ ಭಟ್ಟ,**
ಮಾಜಿ ಗ್ರಾಮ ಪಂಚಾಯ್ತಿ ಛೇರ್ಮನ್,
ಹಾಲ್ಮುತ್ತೂರು.

(ಇದೇ ಅಭಿಪ್ರಾಯ ವ್ಯಕ್ತಪಡಿಸಿ ಅಚ್ಚುಕಟ್ಟುದಾರರ ಸಹಿಗಳೊಂದಿಗೆ ಶಾಸಕರಿಗೆ ಬರೆದಿರುವ ಪತ್ರದ ನಕಲನ್ನೂ ಪತ್ರಿಕೆಗೆ ನೀಡಲಾಗಿದೆ. **—ಸಂ.**)

# ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ : ಮಣಿಪಾಲ, (ಕರ್ನಾಟಕ ರಾಜ್ಯ)

ಶಾಖೆ : ಕೊಪ್ಪ-ಕಡೂರು.

ದಿನಾಂಕ : 6-2-1990

## ಏಲಂ ನೋಟೀಸು

ಈ ಕೆಳಗೆ 'ಶೆಡ್ಯೂಲ್-A'ನಲ್ಲಿ ಕಾಣಿಸಿದ ಸಾಲಗಾರರು ಬ್ಯಾಂಕಿನಿಂದ ಪಡೆದ ಚಿನ್ನಾಭರಣಗಳ ಈಡಿನ ಸಾಲಗಳನ್ನು ನಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ, ರಿಜಿಸ್ತ್ರಿ ಮತ್ತು ಅನೇಕ ನೋಟೀಸುಗಳನ್ನು ಕೊಟ್ಟಾಗ್ಯೂ ಬಾಕಿ ಮಾಡಿ ಕೊಂಡಿರುತ್ತಾರೆ. ಶೆಡ್ಯೂಲ್-B ಯಲ್ಲಿ ಕಾಣಿಸಿದ ಸಾಲಗಾರರು ಆಭರಣಗಳ ಸಾಲವನ್ನು ಪಾವತಿಸಿ ತನ್ನ ಇತರ ಸಾಲಗಳನ್ನು, ವಕೀಲ್ ನೋಟೀಸು, ರಿಜಿಸ್ತ್ರಿ ನೋಟೀಸು ಮತ್ತು ಅನೇಕ ನೋಟೀಸುಗಳನ್ನು ಕೊಟ್ಟರೂ ಸಹ ಸಾಲವನ್ನು ಬಾಕಿ ಮಾಡಿರುವುದರಿಂದ ಸದರಿ ಆಭರಣಗಳ ಮೇಲೆ ಬ್ಯಾಂಕಿನ ಜನರಲ್ ಲೀನ್ ಚಲಾಯಿಸಿರುತ್ತದೆ

ಸದರಿ ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸಾಲದ ಬಾಬ್ತು ಬ್ಯಾಂಕಿಗೆ ಬರತಕ್ಕ ಸಂಪೂರ್ಣ ಮೊಬಲಗನ್ನು ಸಂದಾಯ ಮಾಡಿ ಅಡವಿಟ್ಟ ಆಭರಣಗಳನ್ನು 7-3-90ನೇ ಬುಧವಾರದ ಒಳಗೆ ಬಿಡಿಸಿಕೊಂಡು ಹೋಗದಿದ್ದಲ್ಲಿ, ಆ ಆಭರಣಗಳನ್ನು 14-3-90ನೇ ಬುಧವಾರ ಅಥವಾ ಬ್ಯಾಂಕಿಗೆ ಸೂಕ್ತ ಕಂಡ ದಿನಗಳಲ್ಲಿ ಮಧ್ಯಾಹ್ನ 3-30 ಗಂಟೆಗೆ ಸರಿಯಾಗಿ ಬ್ಯಾಂಕಿನ ಆವರಣದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಎಲ್ಲಾ ಖರ್ಚು-ವೆಚ್ಚಗಳಿಗೆ ಸದ್ರಿ ಸಾಲಗಾರರು ಬದ್ಧರಾಗಿರುತ್ತಾರೆಂದು ಈ ಮೂಲಕ ತಿಳಿಯಪಡಿಸುತ್ತೇವೆ.

(ಸಹಿ) **ಮೇನೇಜರ್,**
ಸಿಂಡಿಕೇಟ್ ಬ್ಯಾಂಕ್, ಕೊಪ್ಪ.

### — ಶೆಡ್ಯೂಲ್ - 'A' —

| ಸಾಲದ ನಂಬ್ರ | ಪಡೆದುಕೊಂಡ ತಾರೀಖು | ಹೆಸರು ಮತ್ತು ವಿಳಾಸ | ಬಾಕಿ ಇರುವ ಮೊಬಲಗು |
|---|---|---|---|
| 174/80 | 26-9-80 | ಎಂ. ಆರ್. ಚಂದ್ರಶೇಖರ s/o ಎಂ. ರಾಮಣ್ಣ ಗೌಡ, ದಿಲ್‌ದಾರ್ ರಸ್ತೆ, ವಿಜಯಪುರ, ಚಿಕ್ಕಮಗಳೂರು. | 7593 80 |
| 64/85 | 20-5-85 | ಸಿ. ಎಸ್. ರಾಮಯ್ಯ ನಾಯ್ಕ s/o ಸುಬ್ಬಣ್ಣ ನಾಯ್ಕ, ಕೃಷಿಕರು, ಮಕ್ಕಿಮನೆ ಅಂಚೆ, ತೀರ್ಥಹಳ್ಳಿ ತಾಲ್ಲೂಕು. | 2604 55 |
| 127/85 | 2-8-85 | ಕುಮುದಮ್ಮ D/o ಶಾಂತ ಶೆಟ್ಟಿ, ಅದ್ದಡ, ಸಿಗದಾಳು-577 120 | 296 95 |
| 131/85 | 9-8-85 | ಎಚ್. ಟಿ ತಿಮ್ಮಪ್ಪ s/o ಎಚ್. ಎಸ್. ತಮ್ಮಯ್ಯ ಡಿ. ಎಫ್. ಒ. ಕಛೇರಿ, ಕೊಪ್ಪ. | 568 90 |
| 208/85 | 4-10-85 | ಪುಟ್ಟಪ್ಪ s/o ಮರಿಯಣ್ಣ, ಕಾರ್‌ಬೈಲು, ಮೇಲುಕೊಪ್ಪ ಅಂಚೆ, ಕೊಪ್ಪ ತಾ॥ | 1238 20 |
| 230/85 | 21-10-85 | ಬಿ. ಎನ್. ಗೋಪಾಲಕೃಷ್ಣ, s/o ಬಿ. ವಿ. ನರಸಿಂಹಯ್ಯ, ಮೊದಲಮನೆ, ಅಂದಗಾರು ಅಂಚೆ. | 953 65 |
| 41/86 | 4-2-86 | ಡಿ. ಆರ್ ಚಂದ್ರಪ್ಪ, s/o ಡಿ. ಎಸ್. ರುದ್ರಪ್ಪ, ಪಿ. ಸಿ. 507, ಪೋಲಿಸ್ ಸ್ಟೇಶನ್, ತರೀಕೆರೆ | 1064 05 |
| 58/86 | 21-2-86 | ಎಚ್. ಎಂ. ನಾಗಪ್ಪ ಗೌಡ, s/o ಮಂಜಪ್ಪ ಗೌಡ, ಸುತ್ತ-ಅಂಚೆ, ನರಸಿಂಹರಾಜಪುರ ತಾಲ್ಲೂಕು. | 3242 75 |
| 11/87 | 30-1-87 | ಕೆ. ಕೆ. ಅಯ್ಯಪ್ಪನ್, s/o ಕೆ. ವಿ. ಕುಟ್ಟನ್, ಎಲ್ಲುಗುಡ್ಡೆ ಅಂಚೆ, ಕಾನೂರು, ನ. ರಾ. ಪುರ ತಾಲ್ಲೂಕು. | 1523 30 |
| 81/87 | 28-4-87 | ಕೆ. ಪರಮೇಶ್ವರ ಗೌಡ s/o ಪುಟ್ಟಣ್ಣ ಗೌಡ, ಪಿ. ಇ. ಟೀಚರ್, ಜ್ಯೂನಿಯರ್ ಕಾಲೇಜ್, ಬಾಳೆಹೊನ್ನೂರು. | 6042 95 |
| 84/87 | 2-5-87 | ಎಂ. ಪಿ. ಮಂಜುನಾಥ, s/o ಎಂ. ಎಸ್. ಪುಟ್ಟಯ್ಯ ನಾಯ್ಕ, ಮಡಲು, ಅಂಚೆ ಗುಣವಂತೆ, ಕೊಪ್ಪ ತಾ॥ | 2979 40 |
| 106/87 | 18-5-87 | ಬಿ ಎಂ. ಶೇಷೇಗೌಡ, s/o ಮಂಜಪ್ಪಗೌಡ, ಸಿಗದಾಳು ಹರಿಹರಪುರ | 485 15 |
| 129/87 | 4-6-87 | ಡಿ. ಟಿ. ಗೋಪಾಲ s/o ತಿಮ್ಮೇನಾಯ್ಕ, ದೋರ್‍ಗಲ್ಲು, ಹಿರೇಕುಡಿಗೆ ಅಂಚೆ | 1040 40 |
| 134/87 | 6-6-87 | ಎಚ್ ಕೆ. ಪುಣ್ಯಮೂರ್ತಿ, s/o ಕೃಷ್ಣಪ್ಪ ನಾಯ್ಕ, ಹಿರೇಕುಡಿಗೆ, ಸೂರ್ಯದೇವಸ್ಥಾನ ಅಂಚೆ | 482 80 |
| 166/87 | 15-7-87 | ಜಾಕೋಬ್ ಲೋಬೊ s/o ಬಾಬಿ ಲೋಬೊ, ಅಂದಗಾರು. | 1467 20 |
| 167/87 | 15-7-87 | ರಂಜನ್ s/o ಗುಂಡಯ್ಯ ವ್ಯಾಪಾರಿ, ವೇಲಿನಪೇಟೆ, ಕೊಪ್ಪ. | 737 [illegible] |
| 179/87 | 29 7.87 | ಬಿ. ಎಂ ಚಂದ್ರಶೇಖರ್ s/o ಮಂಜಪ್ಪನಾಯ್ಕ ಬಾಳೆಗದ್ದೆ, ಹಿರೇಕುಡಿಗೆ ಅಂಚೆ | 3015 40 |
| 186/87 | 5.8.87 | ಎಚ್. ಎಸ್. ತಿಮ್ಮೇಗೌಡ s/o ಶಿವೇಗೌಡ, ರೈಟರ್, ಎಸ್. ಎಂ. ಪ್ಲಾಂಟೇಶನ್ಸ್, ಕೆಸವೆ | 650 80 |
| 187/87 | 12.8.87 | ಎಸ್. ಜಿ. ನಾಗೇಂದ್ರ s/o ಬಿ. ಆರ್. ಗೋವಿಂದ ಗೌಡ, ಕುಂಕುರ್ಡಿ, ಶಾಬಕಲ್ ಅಂಚೆ, ಕೊಪ್ಪ ತಾಲ್ಲೂಕು | 2489 55 |

(ಮುಂದಿನ ಪುಟಕ್ಕೆ)

ಓದುಗರ ಪತ್ರ

## ವಿಚಾರ ಸಂಕಿರಣ ಶ್ಲಾಘನೀಯ ವ್ಯವಸ್ಥೆ

ಪ್ರಿಯರೆ,

ಇದೇ ಜನವರಿ 27 ಮತ್ತು 28 ರಂದು ಕೊಪ್ಪದಲ್ಲಿ ನಡೆದ 'ನೈಸರ್ಗಿಕ ಕೃಷಿ ವಿಚಾರ ಸಂಕಿರಣ' ಕಾರ್ಯಕ್ರಮವು ಅತ್ಯುತ್ತಮ ಮಟ್ಟದ್ದಾಗಿತ್ತು.

ಶ್ರೀ ಪ್ರದೀಪ ಶಪರ್‌ರವರು 2 ದಿನಗಳ ಕಾಲ ನಮ್ಮ ಮೇಲೆ ಸಾಕಷ್ಟು ಪ್ರಭಾವ ಬೀರಿದರು. ಮಾತಿನಲ್ಲೇ ಮೋಡಿ ಮಾಡಿದರೂ ಕೇವಲ ಬಾಯಲ್ಲಿ ಹೇಳುವ ವೇದಾಂತಿ ಆಗದೆ, ಅನುಭವಿ ಕೃಷಿಕರೂ ಆಗಿದ್ದಾರೆ. ಅವರು ಸ್ವತಃ ಮಾಡಿದ್ದನ್ನು ಮಾತ್ರ ನಮಗೆ ವಿವರಿಸಿದ್ದಾರೆನ್ನುವುದು ಅವರ ಸ್ಲೈಡ್‌ಗಳಿಂದ ಮನವರಿಕೆಯಾಗುತ್ತದೆ. ನಾವುಗಳು ಅವರ ಈ ವಿಧಾನಗಳನ್ನು ಅನುಸರಿಸಿ, ಭೂಮಿಯ ಸಾರವನ್ನು ಅಭಿವೃದ್ಧಿಪಡಿಸಿಕೊಂಡು, ಅತಿ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿಯನ್ನು ಪಡೆಯುವಂತಾಗಬೇಕು.

ಆದರೆ ರಾಸಾಯನಿಕ ಗೊಬ್ಬರಗಳೊಂದಿಗೆ ಬೆರೆತು ಹೋಗಿರುವ ನಾವು ರೈತರು, ನಮ್ಮ ಉದಾಸೀನ ಪ್ರವೃತ್ತಿಯ ಮುಸುಕನ್ನು ಬಿಸಾಡಿ, ನಮ್ಮ ಮಿದುಳಿಗೆ ಸ್ವಲ್ಪ ಕೆಲಸ ಕೊಟ್ಟು, ಕ್ರಮಬದ್ಧವಾಗಿ ದುಡಿಯಲು ಸಿದ್ಧರಾಗಬೇಕು

ಏನೇ ಆಗಲಿ, ಇಂತಹ ಅಪೂರ್ವ ಅವಕಾಶ ಒದಗಿಸಿಕೊಟ್ಟ ಕೃಷಿ ವಿಚಾರ ವಿನಿಮಯ ಕೇಂದ್ರ, ಸಿಂಡಿಕೇಟ್ ಬ್ಯಾಂಕ್ ಮತ್ತು ಜೇಸೀಸ್ ಸಂಸ್ಥೆಗಳಿಗೆ ನನ್ನ ವಂದನೆಗಳು

**ಭಾಸ್ಕರರಾವ್**, ಸಿರಿಮನೆ.

## ಜಿಲ್ಲೆಯ ಪರಿಸರ ಸಮಸ್ಯೆಗಳ ಪರಿಹಾರ ಕುರಿತು ಸಮಾಲೋಚನಾ ಸಭೆ

ಕೊಪ್ಪ: ಭದ್ರಾ ಮೇಲ್ದಂಡೆ ಯೋಜನೆ, ಕುದುರೆಮುಖ ಮಾಲಿನ್ಯ, ಸಿ ಮತ್ತು ಡಿ ಭೂಮಿ ಸಮಸ್ಯೆ, ಸೊಪ್ಪಿನ ಬೆಟ್ಟ, ಗುಬ್ಬ ಗದ್ದೆ ಕಾಡಿನಂಥ ಅಕ್ರಮಗಳ ಮೂಲಕ ಕಾಡಿನ ನಾಶ, ಸಣ್ಣ ಹಳ್ಳ-ಚಿಕ್ಕ ಕೆರೆಗಳ ಸಮಸ್ಯೆಗಳು—ಇವೇ ಮುಂತಾದ ಪರಿಸರ ಹಾಗೂ ಜನಜೀವನಕ್ಕೆ ನೇರ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಜಿಲ್ಲೆಯ ಸಂಸತ್ ಸದಸ್ಯರು, ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಜಿ. ಪ. ಅಧ್ಯಕ್ಷರು ಹಾಗೂ ಇತರ ಜನ ಪ್ರತಿನಿಧಿಗಳ ಜೊತೆ **"ಜಿಲ್ಲೆಯ ಪರಿಸರ ಸಮಸ್ಯೆಗಳ ಪರಿಹಾರ ಸಮಾಲೋಚನಾ ಸಭೆ"** ತಾ. 20-2-90ನೇ ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಛೇರಿ ಎದುರಿನ (ಜಿಲ್ಲಾ ಮೈದಾನ) ನೆಹರು ಯುವ ಕೇಂದ್ರದಲ್ಲಿ ನಡೆಯಲಿದೆ.

ಇಂಥ ಸಮಸ್ಯೆಗಳಿಂದ ಕಷ್ಟ-ನಷ್ಟಗಳನ್ನನುಭವಿಸುತ್ತಿರುವ ರೈತರು, ಸಾಮಾಜಿಕರು ಹಾಗೂ ಪರಿಸರಾಸಕ್ತರು ಈ ಸಭೆಯಲ್ಲಿ ತಪ್ಪದೆ ಭಾಗವಹಿಸಬೇಕೆಂದು ಸಭೆಯ ವ್ಯವಸ್ಥೆ ಮಾಡಿರುವ ಜಿಲ್ಲಾ ಮತ್ತು ಕೊಪ್ಪ ತಾ॥ ಪರಿಸರ ಜಾಗೃತಿ ವೇದಿಕೆಗಳು ಕೋರಿವೆ

# ಚುನಾವಣೆ ಬಿಸಿಗಾದರೂ ನೀರು ಬಂದೀತೆ?

ಪ್ರಿಯರೇ,

ಚುನಾವಣೆ 'ಬಿಸಿ' ತಟ್ಟಿದ ಕೂಡಲೇ ಜನಪರ ಕಾರ್ಯಕ್ರಮಗಳನ್ನು ರೂಪಿಸು ವುದು, ಜನ ಸಾಮಾನ್ಯರ ಬಗ್ಗೆ ಕಳಕಳಿ ಒಮ್ಮಿಂದೊಮ್ಮೆಲೇ ಮೂಡುವುದು ಸಹಜ. ಆದರೆ ನರಸಿಂಹರಾಜಪುರ ಮಧ್ಯಾಂತರ ಮಂಡಲ ವ್ಯಾಪ್ತಿಯಲ್ಲಿ ಚುನಾವಣೆ ಸಮೀ ಪಿಸುತ್ತಿದ್ದರೂ (ಚುನಾವಣೆ ಕಾಲದಲ್ಲೂ) ಕುಡಿವ ನೀರು ಪೂರೈಕೆ ಅವ್ಯವಸ್ಥೆಯೇ ?

ಕೆಲವು ದಿನ ನೀರೇ ಇಲ್ಲ. ನೀರು ಬಿಡುವು ದಕ್ಕೂ ನಿರ್ದಿಷ್ಟ ಸಮಯವಿಲ್ಲ. ಬಂದರೆ ಬಂತು, ಇಲ್ಲದಿದ್ರೆ ಇಲ್ಲ. ಕೆಲವು ಪ್ರದೇಶ ಗಳಿಗಂತೂ ನೀರೇ ಇಲ್ಲ. ಇದಕ್ಕೆ ಸರಿಯಾ ಗಿ, ವಿದ್ಯುತ್ ಕಣ್ಣಾ ಮುಚ್ಚಾಲೆ ಆಟ. "ವಿದ್ಯುತ್ ವ್ಯವಸ್ಥೆ ಸರಿ ಇಲ್ಲ: ಇದರಿಂದ ನೀರನ್ನು ಸಮರ್ಪಕವಾಗಿ ಪೂರೈಸುವುದು ಕಷ್ಟ"—ಇದು ರೆಡಿಮೇಡ್ ಉತ್ತರ. ಎಷ್ಟೋ ಮನೆಗಳಲ್ಲಿ ನಲ್ಲಿಗಳಿಗೆ ತಿರುಪುಗಳೇ ಇಲ್ಲ; ನೀರು ಬರುವಷ್ಟು ಹೊತ್ತೂ ಸೋರಿ ಪೋಲಾಗುತ್ತಿರುತ್ತದೆ.

ಈಗಲಾದರೂ ದಿನದ ನಿರ್ದಿಷ್ಟ ಅವಧಿ ಯಲ್ಲಿ ಸಮರ್ಪಕ ನೀರು ಬಿಡುವ ವ್ಯವಸ್ಥೆ ಮಾಡುತ್ತಾರೆಂದು ಆಶಿಸೋಣವೇ ?

**—ನವಿಲೂರು ಪ್ರಕಾಶ್,** ನ.ರಾ. ಪುರ

## 'ಸೌಗಂಧಿಕಾ' ಕವನ ಸಂಕಲನ ಬಿಡುಗಡೆ

ಗುಡ್ಡೇತೋಟ: ಇಲ್ಲಿನ ಶ್ರೀ ವಿನಾಯಕ ಪ್ರಕಾಶನದ 'ಸೌಗಂಧಿಕಾ' ಕವನ ಸಂ ಕಲನ ಬಿಡುಗಡೆಯಾಗಿದ್ದು, ಸಾಹಿತ್ಯಾಭಿ ಮಾನಿಗಳು ಕೊಂಡು ಪ್ರೋತ್ಸಾಹಿಸಬೇಕಾ ಗಿ ಪುಸ್ತಕದ ಕರ್ತೃ ಹಾಗೂ ಪ್ರಕಾಶಕ ಎಂ.ವಿ. ಗಂಗಾಧರ್ ವಿನಂತಿಸಿದ್ದಾರೆ.

'ಸೌಗಂಧಿಕಾ'ದಲ್ಲಿರುವ ಕನ್ನಡ ಗೀತೆ ಗಳನ್ನು ವೆಂಕಟಲಕ್ಷ್ಮಿ ಗಂಗಾಧರ್ ಮತ್ತು ಕು|| ಜಿ.ವಿ. ರಾಜೇಶ್ವರಿ ಹಾಡಿರುವ ಧ್ವನಿ ಸುರುಳಿ (ಕ್ಯಾಸೆಟ್) ಸದ್ಯದಲ್ಲಿಯೇ ಬಿಡು ಗಡೆಯಾಗಲಿದೆ ಎಂದೂ ಅವರು ತಿಳಿಸಿದ್ದಾರೆ

**ಮುಂದಿನ ಪ್ರಕಟಣೆ**

ಪ್ರಕಾಶನದ ಮುಂದಿನ ಪ್ರಕಟಣೆ 'ಕಾಡು ಶ' ಕಿರು ನಾಟಕ ಮತ್ತು 'ಕೃಷ್ಣದೇವ ರಾಯ' ಐತಿಹಾಸಿಕ ನಾಟಕಗಳು ಎಂದು ಗಂಗಾಧರ್ ತಿಳಿಸಿದ್ದಾರೆ.

## ಸಂಘಟಿತ ಯತ್ನಕ್ಕೆ ಕರೆ

(2ನೇ ಪುಟದಿಂದ)

ಘೋಷಿಸುವ ಕಾರ್ಯ ತಡೆಹಿಡಿಯಬೇಕು; ಈ ಮರು ಸರ್ವೆಯಲ್ಲಿ ಸಿ ಅಂಡ್ ಡಿ. ಭೂಮಿ ಮಾತ್ರವಲ್ಲದೆ ಗೋಮಾಳ, ಸೊಪ್ಪಿನ ಬೆಟ್ಟ ಮುಂತಾದುವುಗಳ ಸರ್ವೆ ಯೂ ನಡೆಯಬೇಕು–ಮುಂತಾದ ನಿರ್ಣ ಯಗಳನ್ನು ಕೈಗೊಳ್ಳಲಾಯಿತು.

ವಿಚಾರ ವೇದಿಕೆ ಅಧ್ಯಕ್ಷ ಹೆಬ್ಬಿಗೆ ಚಂದ್ರ ಶೇಖರ್ ನಿರ್ಣಯಗಳನ್ನು ಮಂಡಿಸಿದರು. ಕಾಡಪ್ಪ ಗೌಡ ಸ್ವಾಗತಿಸಿ, ಕವಲುಕುಡಿಗೆ ಶ್ರೀಧರ್ ವಂದಿಸಿದರು.

## ಬ್ಯಾಂಕರ್ಸ್ ಅಸೋಸಿಯೇಶನ್

ಶೃಂಗೇರಿ : ಇಲ್ಲಿನ ಬ್ಯಾಂಕರ್ಸ್ ಅಸೋ ಸಿಯೇಶನ್ ನೂತನ ಪದಾಧಿಕಾರಿಗಳು : ಸಿದ್ದಪ್ಪ (ಅಧ್ಯಕ್ಷ), ಸುಂದರ್, ಸುರೇಶ್, ಶಶಿಧರ್ (ಉಪಾಧ್ಯಕ್ಷರು), ಅಶೋಕ ಬಾಳಿಗ (ಪ್ರ. ಕಾರ್ಯದರ್ಶಿ), ಶಿವ ಗುರು ಪ್ರಸಾದ (ಸಹ ಕಾರ್ಯದರ್ಶಿ), ನಳಿನಾಕ್ಷ (ಖಜಾಂಚಿ).

## ಅಡಿಕೆ ಧಾರಣೆ

ಶಿವಮೊಗ್ಗ : 5-2-1990
ರಾಶಿ : 3000-3906
ಬೆಟ್ಟೆ : 2000-2850
ಗೊರಬಲು : 1000-1950

## ಯುಶಸ್ವಿ ವಾಲಿಬಾಲ್ ಕೂಟ

ಕೊಪ್ಪ: ಇಲ್ಲಿನ ಡೈಮಂಡ್ಸ್ ಯೂತ್ ಕ್ಲಬ್‌ನ 4ನೇ ವಾರ್ಷಿಕೋತ್ಸವದ ಅಂಗ ವಾಗಿ ನಡೆದ ಕೊಪ್ಪ, ಶೃಂಗೇರಿ, ನ. ರಾ. ಪುರ, ತೀರ್ಥಹಳ್ಳಿ ತಾ||ಗಳ ಮಟ್ಟದ ವಾಲಿ ಬಾಲ್ ಪಂದ್ಯಾವಳಿ ಜ. 30 ಮತ್ತು 31 ರಂದು ಯಶಸ್ವಿಯಾಗಿ ನಡೆಯಿತು. ನ.ರಾ. ಪುರ 'ಎ' ತಂಡ ಮೊದಲ ಬಹುಮಾನ ವನ್ನೂ ಕಮ್ಮರಡಿ ತಂಡ 2ನೇ ಸ್ಥಾನ ವನ್ನೂ ಪಡೆದವು

ಕೆ.ವಿ. ಮಂಜುನಾಥ ಶೆಟ್ಟರ ಅಧ್ಯಕ್ಷತೆ ಯಲ್ಲಿ ದೇಜು ಪೂಜಾರ್ ಪಂದ್ಯಾವಳಿ ಉ ದ್ಘಾಟಿಸಿದರು. ಉಮೇಶ್ ಕಲಸರವಳ್ಳಿ ಮುಖ್ಯ ಅತಿಥಿಯಾಗಿದ್ದರು. ಕಿರಿಯ ಕಾಲೇ ಜು ದೈ ಶಿ ಶಿಕ್ಷಕರಾದ ಎಚ್. ಎ ಗೋ ಪಾಲ್ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಡಾ|| ಶಾನಭಾಗ್ ಮತ್ತು ಪತ್ರಕರ್ತ ಎಂ. ಐ ಶ್ರೀನಿವಾಸ ಮೂರ್ತಿ ಮುಖ್ಯ ಅತಿಥಿಗಳಾಗಿದ್ದರು. ಸೆಂಟ್ರಲ್ ಎಕ್ಸೈಜ್ ಇನ್ಸ್‌ಪೆಕ್ಟರ್ ಬಿ. ಎಸ್. ವಿಶ್ವ ನಾಥ್ ಬಹುಮಾನ ವಿತರಿಸಿದರು.

## ಯಕ್ಷಗಾನ ಶಿಕ್ಷಣ ಕೇಂದ್ರದ 7ನೇ ವಾರ್ಷಿಕೋತ್ಸವ

**ಹರಿಹರಪುರ :** ಇಲ್ಲಿನ ಮಲೆನಾಡು ಯಕ್ಷಗಾನ ಕಲಾ ಶಿಕ್ಷಣ ಕೇಂದ್ರದ 7ನೇ ವಾರ್ಷಿಕೋತ್ಸವ ಜ. 15 ರಂದು ಕೊಪ್ಪ ಸ್ಟೇಟ್ ಬ್ಯಾಂಕ್ ಮ್ಯಾನೇಜರ್ ಡಿ. ಸೀತಾರಾಮ ಭಟ್ ಅಧ್ಯಕ್ಷತೆಯಲ್ಲಿ ನಡೆ ಯಿತು. ಬಿ. ಎಂ. ರಘುನಾಥ್, ಲಕ್ಷ್ಮೀ ನಾರಾಯಣ ಭಟ್, ಡಾ|| ಗುರುವಪ್ಪ ಗೌಡ ಅತಿಥಿಗಳಾಗಿದ್ದರು. ಕಾರ್ಯಕ್ರಮದ ನಂತರ ಮಹೋದಯ ಕಲಾ ಮಂಡಳಿ ಮತ್ತು ಅತಿಥಿ ಕಲಾವಿದರಿಂದ 'ರಾಜಾ ವಿಕ್ರಮ' ತಾಳಮದ್ದಲೆ ನಡೆಯಿತು.

(ವರದಿ : ಟಿ.ಎಸ್. ಶ್ರೀಕಂಠ, ಕಾರ್ಯದರ್ಶಿ)

# ಸಿಪಿಐಯಿಂದ ಮತದಾರರ ಸಮಾವೇಶ

ಕೊಪ್ಪ : ಭಾರತ ಕಮ್ಯುನಿಸ್ಟ್ ಪಕ್ಷ ಶೃಂಗೇರಿ ವಿಧಾನ ಸಭಾ ಕ್ಷೇತ್ರದ ಮತ ದಾರರ ಸಮಾವೇಶವನ್ನು ಫೆ. 4ರಂದು ಇ ಲ್ಲಿನ ಪುರಭವನದಲ್ಲಿ ಏರ್ಪಡಿಸಿತು. ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ. ಕೆ. ಸುಂದರೇಶ್ ಅತಿಥಿಯಾಗಿದ್ದರು ಕ್ಷೇತ್ರದ ಮೂರೂ ತಾ ಲ್ಲೂಕುಗಳ ಸುಮಾರು 200 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಳೆದ ವಿಧಾನಸಭಾ ಮತ್ತು ಲೋಕ ಸಭಾ ಚುನಾವಣೆಗಳಲ್ಲಿ ಭಾರತ ಕಮ್ಯು ನಿಸ್ಟ್ ಪಕ್ಷದ ಅಭ್ಯರ್ಥಿಗಳಿಗೆ ಮತ ನೀಡಿದ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸ ಲಾಯಿತು. ಕ್ಷೇತ್ರದ ಜನ ಸಾಮಾನ್ಯರ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿ ಹಾರಕ್ಕಾಗಿ ಈ ಕೆಳಗಿನಂತೆ ಕಾರ್ಯಕ್ರಮ ರೂಪಿಸಲಾಯಿತು.

ಮಾರ್ಚ್ 6 ಮತ್ತು 7ರಂದು ನ.ರಾ. ಪುರ ತಾ||ನಲ್ಲೂ, 29, 30, 31ರಂದು ಕೊಪ್ಪ ತಾ||ನಲ್ಲೂ ಏಪ್ರಿಲ್ 1 ಮತ್ತು [illegible] ರಂದು ಶೃಂಗೇರಿ ತಾ||ನಲ್ಲೂ ಜನ ಜಾಗೃ ತಿ ಸಭೆಗಳನ್ನು ನಡೆಸುವ ಮೂಲಕ ಜನ ಸಮಸ್ಯೆಗಳನ್ನು ಗುರುತಿಸಿ, ಅವುಗಳ ಪರಿ ಹಾರಕ್ಕಾಗಿ ಸರ್ಕಾರವನ್ನು ಒತ್ತಾಯಿಸು ವುದು;

ಕೃಷಿ ಕಾರ್ಮಿಕರ ಹಾಗೂ ರೈತರ ಸಾಲ ವನ್ನು ಮನ್ನಾ ಮಾಡುವಂತೆ ಸರಕಾರ ವನ್ನು ಒತ್ತಾಯಿಸಲು, ಫೆ. 17, 19 ಮತ್ತು 20ರಂದು ಕ್ರಮವಾಗಿ, ನ. ರಾ. ಪುರ, ಶೃಂಗೇರಿ ಮತ್ತು ಕೊಪ್ಪ ತಾಲ್ಲೂಕು ಕೇಂದ್ರಗಳ ಪಿ. ಸಿ. ಎಲ್. ಡಿ. ಬ್ಯಾಂಕು ಗಳನ್ನೂ ಘೇರಾವ್ ಮಾಡುವುದು.

ಈ ಕಾರ್ಯಕ್ರಮಗಳಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ಕೆ. ಸುಂದರೇಶ್ ಭಾಗ ವಹಿಸುತ್ತಾರೆ.

ಹಿಂದಿನ ಪುಟದಿಂದ.

| 1 | 2 | 3 | 4 |
|---|---|---|---|
| 221/87 | 16-9-87 | ನೀಲಮ್ಮ ಹೆಗ್ಗಡ್ತಿ, w/o ಚಿನ್ನಯ್ಯ ಹೆಗ್ಡೆ, ಕಟ್ಟಿನಮನೆ ಅಂಚೆ; ನರಸಿಂಹರಾಜಪುರ ತಾಲ್ಲೂಕು. | 748 10 |
| 275/87 | 28-10-87 | ಟಿ ಎಸ್ ಲೋಕಪ್ಪಗೌಡ s/o ಸುಬ್ಬಯ್ಯ ಗೌಡ, ಕಾಚ್‌ಗಲ್ ಅಂಚೆ, ಕೊಪ್ಪ ತಾಲ್ಲೂಕು. | 2976 15 |

## — ಶೆಡ್ಯೂಲ್ - 'B' —

| ಕ್ರ. ಸಂ. | ಹೆಸರು ಮತ್ತು ವಿಳಾಸ | ಸಾಲದ ನಂಬ್ರ | ಬಾಕಿ ಇರುವ ಮೊಬಲಗು |
|---|---|---|---|
| 1 | ಎ. ಆರ್. ಸತ್ಯನಾರಾಯಣ ಶಾಸ್ತ್ರಿ, s/o ರಾಮಶಾಸ್ತ್ರಿ, ಎಲೆಕ್ಟ್ರಿಕ್ ಕಂಟ್ರಾಕ್ಟರ್, ಮೇಲಿನಪೇಟೆ, ಕೊಪ್ಪ. | OSL 9/85 | 20566 8[illegible] |
| 2 | ಬಿ ಕೆ. ವೆಂಕಟಾಚಲ s/o ಬಿ.ವಿ. ಕೃಷ್ಣಮೂರ್ತಿ, ಕುಂಚೂರು, ಅಂದಗಾರು ಅಂಚೆ. | FL 150/81 | 550 0[illegible] |
| 3 | ರಾಮಯ್ಯ s/o ಬಡಿಯಯ್ಯ, ಹರಿಜನ ಕಾಲನಿ, ಬಾಳಗಡಿ–ಕೊಪ್ಪ. | FL 73/82 | 664 [illegible] |
| 4 | ಕೆ. ನಾರಾಯಣ ನಾಯಕ್ s/o ಮಾಧವ ನಾಯಕ್, ಗ್ರಾಮ ಲೆಖ್ಖಾಧಿಕಾರಿ, ಹೊಸಕೊಪ್ಪ, ಕೊಪ್ಪ ತಾ|| | FL 136/83 | 27436 [illegible] |
| 5 | ಎ ಎಸ್. ಚಂದ್ರಶೇಖರ s/o ಸೀತಾರಾಮಯ್ಯ, ಕರಿಮನೆ ಗ್ರಾಮ, ಕಲ್ಕೆರೆ ಅಂಚೆ | FL 122/85 | 6321 [illegible] |
| 6 | ಎಸ್. ರಾಮಭಟ್ಟ s/o ಶಾಮಭಟ್ಟ ಸೋಮಲಾಪುರ ಅಂಚೆ, ಅಂದಗಾರು | COD 64/82 | 6893 [illegible] |
| 7 | ಬಿ ಜಿ. ಪುಟ್ಟಣ್ಣ s/o ಗುಂಡಯ್ಯ ಬೆಳಗೊಳ, ನಾರ್ವೆ | FL 10/82 | 4208 [illegible] |
| 8 | ಮೇರಿ ಟಾವ್ರೊ w/o ಅಂಟೋನಿ ಡಿ' ಕುನ್ಹ, ಜೋಗಿಸರ, ಬಿಂತ್ರವಳ್ಳಿ ಗ್ರಾಮ, ಜೇರುಕುಡಿಗ ಅಂಚೆ, ಕೊಪ್ಪ ತಾ|| | FL 30/86 | 1230 [illegible] |
| 9 | ಕೆ. ಚಂದ್ರಶೇಖರ s/o ಕೃಷ್ಣಪ್ಪ, ಲೈನ್ ಮ್ಯಾನ್ ದೂರವಾಣಿ ವಿನಿಮಯ ಕೇಂದ್ರ, ಕುದುರೆಗುಂಡಿ | DL 76/81 | 1025 [illegible] |

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ, ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ.